# ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

**ನಸದೊ/ಸಾ.ಆ.ವಿ/ವಿ.ಸ.4/2008-09** **ದಿನಾಂಕ:16-09-2008**

## -:: ವಿಶೇಷ ಸಭೆ ನಡವಳಿಕೆಗಳು ::-

ದಿನಾಂಕ:16-09-2008ರಂದು ಮಂಗಳವಾರ ಬೆಳಿಗ್ಗೆ 11.00ಗಂಟೆಗೆ ನಗರಸಭೆಯ ಸಭಾಂಗಣ ದಲ್ಲಿ ಮಾನ್ಯ ನಗರಸಭಾ ಅಧ್ಯಕ್ಷರಾದ **ಶ್ರೀ ಜಿ.ರಾಮಕೃಷ್ಣ** ರವರ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಭೆಯಲ್ಲಿ ನಗರಸಭಾ ಉಪಾಧ್ಯಕ್ಷರು ಮತ್ತು ನಗರಸಭೆಯ ಎಲ್ಲಾ ಸದಸ್ಯರುಗಳು ಸೇರಿ ತೆಗೆದುಕೊಂಡ ನಿರ್ಣಯಗಳು:-

**ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ವಿವರ:**

| ಸದಸ್ಯರುಗಳು | ಹಾಜರಿ | ಗೈರು ಹಾಜರಿ | ಒಟ್ಟು |
|---|---|---|---|
| | 21 | 10 | 31 |

ಮೊದಲಿಗೆ ನಗರಸಭೆಯ ಪೌರಾಯುಕ್ತರಾದ **ಶ್ರೀ ಎಸ್.ಜಿ.ರಾಜಶೇಖರ್‌ರವರು** ನಗರಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಗರಸಭೆಯ ಎಲ್ಲಾ ಸದಸ್ಯರವರಿಗೂ ಸಭೆಯಲ್ಲಿ ಸ್ವಾಗತವನ್ನು ಕೋರಿದರು, ನಂತರ ಮಾನ್ಯ ಅಧ್ಯಕ್ಷರನ್ನು ಸಭೆಯನ್ನು ಪ್ರಾರಂಭಿಸಲು ಅನುಮತಿಯನ್ನು ಕೋರಿದರು.

**ವಿಷಯ ಸಂಖ್ಯೆ:1**

ಕರ್ನಾಟಕ ಘನ ಸರ್ಕಾರದ ಗೌರವಾನ್ವಿತ ಮುಖ್ಯಮಂತ್ರಿಗಳಾದ **ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು** ಮತ್ತು ಸಚಿವರುಗಳು ದಿನಾಂಕ:18-09-2008ರಂದು ದೊಡ್ಡಬಳ್ಳಾಪುರ ನಗರಕ್ಕೆ ಆಗಮಿಸುತ್ತಿರುವುದರಿಂದ ಪೌರಸನ್ಮಾನ ಮಾಡುವ ವಿಚಾರ.

**ತೀರ್ಮಾನ ಸಂಖ್ಯೆ:1**

ಮೇಲ್ಕಂಡ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಕರ್ನಾಟಕ ಘನ ಸರ್ಕಾರದ ಗೌರವಾನ್ವಿತ ಮುಖ್ಯಮಂತ್ರಿಗಳಾದ **ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು** ಮತ್ತು ಸಚಿವರುಗಳು ದಿನಾಂಕ: 18-09-2008ರಂದು ದೊಡ್ಡಬಳ್ಳಾಪುರ ನಗರಕ್ಕೆ ಆಗಮಿಸುತ್ತಿರುವುದರಿಂದ ಪೌರಸನ್ಮಾನ ಮಾಡಲು ಬೇಕಾಗುವಂತಹ ಅವಶ್ಯಕ ಸಾಮಗ್ರಿಗಳನ್ನು ಖರೀದಿಸಲು ಆಗುವ ವೆಚ್ಚವನ್ನು ನಗರಸಭಾ ನಿಧಿಯಿಂದ ಭರಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಿಷಯ **ಸಂಖ್ಯೆ:2**

ಶೇ.18ರ ಫಲಾನುಭವಿಗಳನ್ನು ಗುರ್ತಿಸಿ ಪ್ರೋತ್ಸಾಹ ಧನ ನೀಡುವ ವಿಚಾರ.

**ತೀರ್ಮಾನ ಸಂಖ್ಯೆ:2**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ನಗರವ್ಯಾಪ್ತಿಯಲ್ಲಿ ಶೇ.18ರ ಫಲಾನುಭವಿಗಳ ಪಟ್ಟಿಯನ್ನು ಗುರ್ತಿಸಿ ನಂತರ ಕ್ರಮ ಕೈಗೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**<u>ಅಧ್ಯಕ್ಷರ ಅಪ್ಪಣೆ ಮೇರೆಗೆ ತರಬಹುದಾದ ಇತರೆ ವಿಚಾರಗಳಲ್ಲಿ:</u>**

**<u>ವಿಷಯ ಸಂಖ್ಯೆ:3/1</u>**

2008-09ನೇ ಸಾಲಿಗೆ ನಗರಸಭಾ ನಿಧಿಯಡಿಯಲ್ಲಿ ರೂ.39.90ಲಕ್ಷಗಳಿಗೆ ಶೇ.18ರ ಕ್ರಿಯಾ ಯೋಜನೆ ಅನುಮೋದನೆ ನೀಡುವ ವಿಚಾರ.

-2-

**ತೀರ್ಮಾನ ಸಂಖ್ಯೆ:3/1**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ನಗರಸಭಾ ನಿಧಿಯಡಿಯಲ್ಲಿ ಶೇ.18ರ ಬಾಬ್ತು ಸರ್ಕಾರದ ಸುತ್ತೋಲೆಯ ಅನುಪಾತದಂತೆ ಹಾಗೂ ಹಿಂದಿನ ಸಾಲಿನಲ್ಲಿ ಹೆಚ್ಚುವರಿಯಾಗಿದ್ದ ಕಾಮಗಾರಿಗಳ ಮತ್ತು ಇತರೆ ಅಭಿವೃದ್ಧಿ ಕಾರ್ಯಗಳ ಕ್ರಿಯಾ ಯೋಜನೆಯನ್ನು ಈ ಕೆಳಕಂಡಂತೆ ತಯಾರಿಸಲಾಗಿರುತ್ತೆ. ಅದರಂತೆ ಕ್ರಿಯಾ ಯೋಜನೆಗೆ ಮಾನ್ಯ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆಯಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

| ಕ್ರ. ಸಂ. | ವಿವರ | ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1. | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ವಿದ್ಯಾರ್ಥಿ ನಿಲಯ ಮತ್ತು ಶಾಲೆಗಳ ವಿದ್ಯಾರ್ಥಿಗಳಿಗೆ ವಿಧ್ಯಾರ್ಜನೆಗಾಗಿ ಅಗತ್ಯ ಸಲಕರಣೆಗಳು ಹಾಗೂ ಸಮವಸ್ತ್ರ ಇತ್ಯಾದಿಗಳನ್ನು ಖರೀದಿಸಿ ಕೊಡುವ ವಿಚಾರ. | 1.00 |
| 2. | ನೇಮಕಾತಿ ಪ್ರಾಧಿಕಾರಕ್ಕೆ ಸಂದರ್ಶನಕ್ಕೆ ಹಾಜರಾಗುವ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಅಭ್ಯರ್ಥಿಗಳಿಗೆ ಪ್ರಯಾಣ ವೆಚ್ಚ ಭರಿಸಲು, | 0.15 |
| 3. | ದೀರ್ಘ ಕಾಲದ ಕಾಯಿಲೆಯಿಂದ ನರಳುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಡುಬಡವರಿಗೆ ವೈದ್ಯಕೀಯ ವೆಚ್ಚ ಭರಿಸಲು, | 0.20 |
| 4. | ಅಗ್ನಿ ದುರಂತ/ಪ್ರಕೃತಿ ವಿಕೋಪಕ್ಕೊಳಗಾದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಪರಿಹಾರ ಒದಗಿಸಲು, | 0.20 |
| 5. | 22ನೇ ವಾರ್ಡ್‌ನಲ್ಲಿ ಸಮುದಾಯ ಭವನ /ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ | 1.15 |
| 6. | ನೇಮಕಾತಿ ಪ್ರಾಧಿಕಾರಕ್ಕೆ ಸಂದರ್ಶನಕ್ಕೆ ಹಾಜರಾಗುವ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ವರ್ಗಗಳ ಅಭ್ಯರ್ಥಿಗಳಿಗೆ ಪ್ರಯಾಣ ವೆಚ್ಚಭರಿಸಲು | 0.20 |
| 7. | ದೀರ್ಘ ಕಾಲದ ಖಾಯಿಲೆಯಿಂದ ನರಳುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಡುಬಡವರಿಗೆ ವೈದ್ಯಕೀಯ ವೆಚ್ಚ ಭರಿಸಲು | 0.25 |
| 8. | ಅಗ್ನಿ ದುರಂತ/ಪ್ರಕೃತಿ ವಿಕೋಪಕ್ಕೊಳಗಾದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವರಿಗೆ ಪರಿಹಾರ ಒದಿಗಸಲು | 0.25 |
| 9. | ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದವರ ಕಾಲೋನಿಯಲ್ಲಿ ಗ್ರಂಥಾಲಯ ಕಟ್ಟಡ ಮತ್ತು ಪೀಠೋಪಕರಣ ಹಾಗೂ ಪುಸ್ತಕಗಳನ್ನು ಖರೀದಿಸಲು | 3.00 |
| 10. | ಆರ್ಥಿಕ ಪ್ರಗತಿಗಾಗಿ ವಿವಿಧ ವೃತ್ತಿಗಳಲ್ಲಿ ಕೌಶಲ್ಯ ಪಡೆದಿರುವ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದವರಿಗೆ ಉಪಕರಣ/ಸಾಧನಗಳನ್ನು (ಹೊಲಿಗೆ ಯಂತ್ರ/ಬ್ಯೂಟಿಷೀಯನ್ ಕಿಟ್) | 3.00 |
| | **ಒಟ್ಟು ಮೊತ್ತ ರೂ.** | 9.40 |
| | **<u>2007-08ನೇ ಸಾಲಿನ ಅಂತ್ಯಕ್ಕೆ ಹೆಚ್ಚಿಗೆ ಇರುವ ಅನುದಾನದ ಕಾರ್ಯಕ್ರಮಗಳ ವಿವರ:</u>** | |
| 1. | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಯುವಕ ಯುವತಿಯರಿಗೆ ಟೈಲರಿಂಗ್/ ಗಣಕಯಂತ್ರ/ಬ್ಯೂಟೀಷಿಯನ್ ತರಬೇತಿಗಾಗಿ (2006-07ರ ಬಾಬ್ತು 2.00ಲಕ್ಷ 2007-08 ಒಟ್ಟು ರೂ.3.30ಲಕ್ಷ) | 5.36 |

| | | |
|---|---|---|
| 2. | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಸ್ಮಶಾನಕ್ಕೆ ಕಾಂಪೌಂಡ್ ನಿರ್ಮಾಣಕ್ಕಾಗಿ | 1.89 |

| 1 | 2 | 3 |
|---|---|---|
| 3. | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲೋನಿಯಲ್ಲಿ ಬಾಕ್ಸ್ ಟೈಪ್ ಚರಂಡಿ ನಿರ್ಮಾಣ ಕಾಮಗಾರಿ (9ನೇ ವಾರ್ಡ್ ಸಂಜಯನಗರ, 6ನೇ ವಾರ್ಡ್ ಮುತ್ತೂರು) ಹಾಗೂ ಸಿದ್ದೇನಾಯಕನಹಳ್ಳಿ ಸರಕಾರಿ ಶಾಲೆಗೆ ಕಾಂಪೌಂಡ್ ನಿರ್ಮಾಣ ಕಾಮಗಾರಿ (2007-08ನೇ) | 3.30 |
| 4. | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕಾಲೋನಿಯಲ್ಲಿ ಕಾಮಗಾರಿಗಾಗಿ (2006-07ರ ಬಾಬ್ತು) | 5.25 |
| 5. | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಂಗವಿಕಲರಿಗೆ ಅವಶ್ಯಕ ವಸ್ತು ಮತ್ತು ಸಾಮಗ್ರಿ/ಸಲಕರಣೆ ಒದಗಿಸುವ ಬಾಬ್ತು (2006-07ರಲ್ಲಿ 1.00ಲಕ್ಷ ಕಾಯ್ದಿರಿಸಿದ್ದು, 0.50 ಲಕ್ಷಗಳನ್ನು ಮಾತ್ರ ತೆಗೆದುಕೊಳ್ಳಲಾಗಿದೆ) | 0.50 |
| 6. | ಅಗ್ನಿ ದುರಂತ ಪ್ರಕೃತಿ ವಿಕೋಪಕ್ಕೆ ಒಳಗಾದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ಪರಿಹಾರಕ್ಕಾಗಿ (2006-07ರ ಬಾಬ್ತು 74000/-ಇದ್ದು 24000/- ಮೊತ್ತ ಕಾಯ್ದಿರಿಸಲಾಗಿದೆ) | 0.50 |
| 7. | ದೌರ್ಜನ್ಯಕ್ಕೊಳಗಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಆಹಾರ/ಪರಿಹಾರಕ್ಕೆ (2006-07ರಲ್ಲಿ ಕಾಯ್ದಿರಿಸಿದ ಬಾಬ್ತು) | 0.25 |
| 8. | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪದವಿ ಮಟ್ಟದ ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕಾಗಿ ಶಿಕ್ಷಣ ಶುಲ್ಕ (ಬಿಲ್ಡಿಂಗ್ ಪಂಪ್ ಹೊರತುಪಡಿಸಿ) ಹಾಗೂ ನೇಮಕಾತಿ ಪ್ರಾಧಿಕಾರಕ್ಕೆ ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಪ್ರಯಾಣ ವೆಚ್ಚಕ್ಕಾಗಿ. (2006-07ರಲ್ಲಿ ಕಾಯ್ದಿರಿಸಿದ ಬಾಬ್ತು ರೂ.63,000/-ಗಳಲ್ಲಿ ರೂ.41,000/-ಗಳನ್ನು ಕಾಯ್ದಿರಿಸಿದೆ) | 0.32 |
| | **ಒಟ್ಟು ರೂ.** | **17.37** |
| | **2008-09ನೇ ಸಾಲಿನಲ್ಲಿ ಉಳಿದ ಅನುದಾನದ ಬಾಬ್ತಿನಲ್ಲಿ ಅಳವಡಿಸಿಕೊಂಡಿರುವ ಕಾರ್ಯಕ್ರಮಗಳ ವಿವರ:-** | |
| 1. | ದೊಡ್ಡಬಳ್ಳಾಪುರ ಟೌನಿನಲ್ಲಿ ಗಂಗಾಧರಪುರ ಸರ್ವೆ ನಂಬರು.6ರಲ್ಲಿ 0.20ಗುಂಟೆ ಪ್ರದೇಶದಲ್ಲಿ ಅಂಬೇಡ್ಕರ್ ಭವನ ನಿರ್ಮಿಸಲು ನಗರಸಭೆ ವತಿಯಿಂದ ವಂತಿಕೆಗಾಗಿ. (ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿ, ದೊಡ್ಡಬಳ್ಳಾಪುರ ಪತ್ರ ಸಂ.ತಾಸಕಅ/ ದೊ.ಅಂ/ಭವನ/ಸಿಆರ್.14/97-98 ದಿನಾಂಕ:15-09-2008 ರಂತೆ) | 10.00 |
| | **ಶಿಕ್ಷಣ ಅಭಿವೃದ್ಧಿಗೆ ಶೇ.40 ರಷ್ಟು (1.25ಲಕ್ಷ)** | |
| 2. | ಎಸ್.ಎಲ್.ಎಸ್.ಸಿ. ಮತ್ತು 7ನೇ ತರಗತಿಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಸ್ಕಾಲರ್‌ಶಿಪ್ ವಿತರಣೆ. | 1.25 |
| | **ಆರ್ಥಿಕ ಅಭಿವೃದ್ಧಿಗೆ ಶೇ.40ರಷ್ಟು (1.25ಲಕ್ಷ)** | |
| 3. | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ ಕಾರ್ಯಕ್ರಮಕ್ಕಾಗಿ. | 1.25 |

| 1 | 2 | 3 |
|---|---|---|
| | **ಇತರೆ ಅಭಿವೃದ್ಧಿಗಾಗಿ ಶೇ.20(0.63ಲಕ್ಷ)** | |
| 4. | ಕಛೇರಿಪಾಳ್ಯದ ಅಡ್ಡರಸ್ತೆಗಳಲ್ಲಿ ಡೆಕ್ ಸ್ಲಾಬ್ ಕಲ್ವರ್ಟ್ ನಿರ್ಮಿಸುವ ಕಾಮಗಾರಿ | 0.63 |
| | **ಒಟ್ಟು ಮೊತ್ತ ರೂ.** | 13.13 |
| | **ಕ್ರಿಯಾ ಯೋಜನೆಯ ಒಟ್ಟು ಮೊತ್ತ** | 39.90 |

**ಸಹಿ:–**

**(ಜಿ.ರಾಮಕೃಷ್ಣ)**

**ಅಧ್ಯಕ್ಷರು,**

**ನಗರಸಭೆ,**

**ದೊಡ್ಡಬಳ್ಳಾಪುರ.**

**“ ನಕಲು ಪ್ರತಿ ”**

**ಪೌರಾಯುಕ್ತರು,**
**ನಗರಸಭೆ, ದೊಡ್ಡಬಳ್ಳಾಪುರ.**